# ಮೂವರು ಮಂತ್ರಿಗಳು



ಪ್ರಜಾಪಾಲಕನಾಗಿದ್ದ ರಾಜನೊಬ್ಬನಿಗೆ ಮೂವರು ಮಂತ್ರಿಗಳಿದ್ದರು. ಅವರಲ್ಲಿ ಧೂರ್ತರೂ ಇದ್ದರು. ರಾಜನಿಗೆ ವಿಶ್ವಾಸಾರ್ಹರೆಂದು ತೋರ್ಪಡಿಸುತ್ತಿದ್ದರೂ. ರಾಜಾಜ್ಞೆಯನ್ನು ಪಾಲಿಸುತ್ತಿರಲಿಲ್ಲ. ಇದು ರಾಜನಿಗೆ ಗೊತ್ತಿದ್ದರೂ ಅವರನ್ನು ಶಿಕ್ಷಿಸುವಂತಿರಲಿಲ್ಲ.

ಒಂದು ದಿನ ರಾಜ ಮೂವರು ಮಂತ್ರಿಗಳನ್ನು ಕರೆದು ಪ್ರತಿಯೊಬ್ಬರಿಗೂ ಒಂದೊಂದು ಗೋಣಿ ಚೀಲವನ್ನು ಕೊಟ್ಟು ಕಾಡಿನಿಂದ ಹಣ್ಣುಗಳನ್ನು ಕಿತ್ತು ಅದರಲ್ಲಿ ತುಂಬಿಸಿ ತರುವಂತೆ ಹೇಳಿದ.

ರಾಜಾಜ್ಞೆಯಂತೆ ಮೊದಲನೆಯ ಮಂತ್ರಿ ಕಾಡನ್ನೆಲ್ಲಾ ಸುತ್ತಿ ಒಳ್ಳೊಳ್ಳೆಯ ಹಣ್ಣುಗಳನ್ನು ಗೋಣಿಯಲ್ಲಿ ತುಂಬಿಸಿದ. ಎರಡನೆಯವನು ರಾಜನೇನು ಪೂರ್ತಿ ಗೋಣಿಯನ್ನು ನೋಡುತ್ತಾನೆಯೇ ಎಂದು ಗೋಣಿಯಲ್ಲಿ ಮುಕ್ಕಾಲು ಕೊಳೆತ ಹಣ್ಣುಗಳನ್ನು, ಮೇಲ್ಭಾಗದಲ್ಲಿ ಒಳ್ಳೆಯ ಹಣ್ಣುಗಳನ್ನು ತುಂಬಿಸಿದ. ಮೂರನೆಯವನು ರಾಜನೇನು ಗೋಣಿಚೀಲವನ್ನು ನೋಡುವುದಿಲ್ಲ ಎಂದು ಕಾಡಿಗೆ ಹೋಗದೆ ಮನೆಯಲ್ಲಿದ್ದ ಎಲೆಗಳು, ಕಸಗಳನ್ನು ತುಂಬಿದ.

ಮಾರನೆಯ ದಿನ ಮೂವರು ಮಂತ್ರಿಗಳು ಗೋಣಿಚೀಲಗಳನ್ನು ರಾಜನ ಮುಂದೆ ಹಾಜರ್‌ಪಡಿಸಿದರು. ರಾಜ ಯಾವ ಗೋಣಿಗಳನ್ನೂ ನೋಡದೆ ರಾಜಭಟರನ್ನು ಕರೆದು ಮೂವರನ್ನು ಸೆರೆಮನೆಯ ಮೂರು ಪ್ರತ್ಯೇಕ ಕೋಣೆಗಳಲ್ಲಿ ಅವರು ತಂದ ಗೋಣಿ ಚೀಲಗಳೊಡನೆ ಇರಿಸಿದ ಹಾಗೂ ಮೂವರಿಗೆ 3 ತಿಂಗಳು ಆಹಾರವನ್ನು ಕೊಡಕೂಡದೆಂದು ಅಜ್ಞಾಪಿಸಿದ. ಅದರಂತೆ ಮೂವರು ಸೆರೆಮನೆಯಲ್ಲಿ ಡಲ್ಪಟ್ಟರು.

ಮೂರು ತಿಂಗಳ ನಂತರ ಕೊಠಡಿಗಳನ್ನು ತೆರೆದಾಗ ಮೊದಲನೆಯ ಕೋಣೆಯಿಂದ ಆರೋಗ್ಯವಂತನಾದ ಮೊದಲನೆಯ ಮಂತ್ರಿ ಬಂದ. ಎರಡನೆಯ ಕೊಠಡಿಯನ್ನು ತೆರೆದಾಗ ರೋಗಗ್ರಸ್ತನಾಗಿದ್ದ ಎರಡನೆಯ ಮಂತ್ರಿ ಬಂದರೆ, ಮೂರನೆಯ ಮಂತ್ರಿ ಕೊಠಡಿಯಲ್ಲಿ ಸತ್ತುಬಿದ್ದಿದ್ದ.

ರಾಜಾಜ್ಞೆಯನ್ನು ಪಾಲಿಸಿದ್ದ ಮಂತ್ರಿ ಶುಭವನ್ನು ಕಂಡರೆ ಇನ್ನಿಬ್ಬರು ತಾವು ಮಾಡಿದ ಕಾರ್ಯಕ್ಕೆ ತಕ್ಕಂತೆ ಫಲವನ್ನುಂಡರು.

**-ಎಂ. ಮೋಹನ್‌ರಾವ್, ಬೆಂಗಳೂರು**

---

## ನಿಮಗೆಷ್ಟು ಗೊತ್ತು

# ಕಪ್ಪೆ ಸಾಮ್ರಾಜ್ಯದ ವಿಷಕಂಠ



ಅಮೆಝಾನ್‌ನ ಮಳೆಕಾಡಿನಲ್ಲಿರುವ ಆರೋ ಫ್ರಾಗ್‌ಗಳನ್ನು ಜಗತ್ತಿನ ವಿಷಕಾರಿ ಕಪ್ಪೆಗಳೆಂದು ಘೋಷಿಸಲಾಗಿದ್ದು, ಈ ಕಪ್ಪೆಗಳನ್ನು ಮುಟ್ಟುವುದೂ ಕೂಡ ಅಪಾಯಕಾರಿಯಂತೆ. ಅವುಗಳ ದೇಹದಲ್ಲಿನ ಹನಿ ವಿಷವೂ ಸಹ ಮನುಷ್ಯನನ್ನು ಕೊಲ್ಲುವಷ್ಟು ಸಾಮರ್ಥ್ಯ ಹೊಂದಿದೆಯಂತೆ. ಪ್ರತೀ ಕಪ್ಪೆಯ ದೇಹದಲ್ಲೂ ಅಂದಾಜು 10,000 ಇಲಿಗಳನ್ನು ಕೊಲ್ಲುವಷ್ಟು ವಿಷ ಸಂಗ್ರಹವಾಗಿರುತ್ತದೆಯಂತೆ!

ಡೆಂಡ್ರೋಬೇಟ್ಸ್ ಟಿನ್ಕೋರಿಯಸ್ ಎಂಬ ವೈಜ್ಞಾನಿಕ ಹೆಸರುಳ್ಳ ಡೆಂಡ್ರೋಬೇಟಿಡೆ ಕುಟುಂಬದ ಉಭಯವಾಸಿ ಪಂಗಡದ ಈ ಕಪ್ಪೆಗಳು ಸದಾಕಾಲ ತೇವಾಂಶವುಳ್ಳ ಜವುಗು ಪ್ರದೇಶಗಳನ್ನು ಇಷ್ಟಪಡುತ್ತವೆ. ಹೆಚ್ಚಾಗಿ ಮಧ್ಯ ಹಾಗೂ ದಕ್ಷಿಣ ಅಮೆರಿಕಾದ ಮಳೆ ಬೀಳುವ ಕಾಡುಗಳಲ್ಲಿನ ಕೆಸರು, ತಗ್ಗುಪ್ರದೇಶ ಹಾಗೂ ಕೊಳಗಳಲ್ಲಿ ಕಂಡುಬರುತ್ತವೆ. ಅಲ್ಲದೇ ಉಷ್ಣವಲಯದ ಬೊಲಿವಿಯಾ, ವೆನುಜುವೆಲಾ, ಫ್ರೆಂಚ್ ಗಯಾನ, ಪೆರು, ಪನಾಮಾ ಮತ್ತು ಹವಾಯಿ ಪ್ರದೇಶಗಳಲ್ಲಿ ಕಾಣಸಿಗುತ್ತವೆ. ಹೆಚ್ಚಾಗಿ ನೆಲಕ್ಕೆ ಅಂಟಿಕೊಂಡೇ ವಾಸಿಸುವ ಇವು ಕೆಲವೊಮ್ಮೆ ನೆಲದಿಂದ 10 ಮೀಟರುಗಳಷ್ಟು ಎತ್ತರದವರೆಗೂ ಮರಗಳನ್ನೇರಿ ಕೀಟಗಳನ್ನು ಬೇಟೆಯಾಡುತ್ತಿರುತ್ತವೆ. ಸಾಕಷ್ಟು ಸಣ್ಣಗಾತ್ರದ ಈ ಕಪ್ಪೆಗಳು 1.5 ಸೆಂ.ಮೀ ನಿಂದ 6 ಸೆಂ.ಮೀ ಗಳಷ್ಟು ಉದ್ದವಿರುತ್ತವೆ.

ಇವುಗಳು ನೋಡಲು ಆಕರ್ಷಕವಾಗಿದ್ದು ಹಳದಿ, ಕೆಂಪು, ಕೇಸರಿ, ನೀಲಿ, ಹಸಿರು, ಕಪ್ಪು ಹೀಗೆ ವಿವಿಧ ಮೈಬಣ್ಣದಿಂದ ಕೂಡಿರುತ್ತವೆ. ವಿಶೇಷವೆಂದರೆ ಇವುಗಳ ಮೈಬಣ್ಣದ ಗಾಢತೆ ಹೆಚ್ಚಿದ್ದಷ್ಟೂ ಅವುಗಳು ಹೆಚ್ಚು ವಿಷಕಾರಿಯಂತೆ. ತನ್ನ ಮೇಲೆ ದಾಳಿ ಮಾಡಲು ಯತ್ನಿಸುವ ಶತ್ರುಗಳಿಗೆ ಇದು ತನ್ನ ಮೈಬಣ್ಣದಿಂದಲೇ ತಾನೆಷ್ಟು ಅಪಾಯಕಾರಿ ಎಂಬುದನ್ನು ಸೂಚಿಸುತ್ತದೆಯಂತೆ.

ಪ್ರಾಣಿತಜ್ಞರ ಸಂಶೋಧನೆಗಳ ಪ್ರಕಾರ ಈ ಕಪ್ಪೆಗಳು ಜನ್ಮತಃ ವಿಷಕಾರಿಗಳಲ್ಲ. ಆದರೆ ಅವುಗಳು ಸೇವಿಸುವ ತಗಣೆ, ಗೆದ್ದಲು, ಇರುವೆ, ರೆಕ್ಕೆಹುಳು, ಜೀರುಂಡೆ ಹಾಗೂ ಇನ್ನಿತರೆ ಹಾರಾಡುವ ಕೀಟಗಳಿಂದಾಗಿ ವಿಷಕಾರಿ ಅಂಶವನ್ನು ಪಡೆಯುತ್ತಾ ಹೋಗುತ್ತವೆ. ಈ ಕಪ್ಪೆಗಳು ಮಾಂಸಾಹಾರಿಗಳಾಗಿದ್ದು ತಮ್ಮ ನಾಲಿಗೆಯ ಸಹಾಯದಿಂದ ಬೇಟೆಯನ್ನು ದಕ್ಕಿಸಿಕೊಳ್ಳುತ್ತವೆ. ನಾಲಿಗೆಯು ಅಂಟಿನಿಂದ ಕೂಡಿದ್ದು ಕೀಟಗಳು ಅದಕ್ಕೆ ಸುಲಭವಾಗಿ ಅಂಟಿಕೊಳ್ಳುತ್ತವೆ,

5 –15 ವರ್ಷಗಳಷ್ಟು ಜೀವಿತಾವಧಿಯನ್ನು ಹೊಂದಿರುವ ಈ ಕಪ್ಪೆಗಳಲ್ಲಿ 170ಕ್ಕೂ ಅಧಿಕ ಪ್ರಬೇಧಗಳಿವೆ. ಅವುಗಳಲ್ಲಿ ಫಿಲೋಬೇಟ್ಸ್ ಟೆರಿಬಿಲಿಸ್ ಎಂಬ ಪ್ರಬೇಧವು ಅತ್ಯಂತ ವಿಷಕಾರಿ ಕಪ್ಪೆಯೆಂದು ಹೆಸರಾಗಿದ್ದು ಇದರ ದೇಹದಲ್ಲಿನ ವಿಷದಿಂದ ಸುಮಾರು 20 ಜನರನ್ನು ಕೊಲ್ಲಬಹುದಂತೆ..!

**– ಪ.ನಾ.ಹಳ್ಳಿ**